ಕುಳಿತು ಕಾಫಿ ಕುಡಿದು ಎದ್ದು ರೂಮಿಗೆ ಬಂದರು. ಮೀರಾ ಇನ್ನೂ ಗಂಭೀರವಾಗಿಯೇ ಇದ್ದಳು.

'ಯಾಕೆ ತಿನ್ನೋಕೆ ಏನೂ ತೆಗೆದುಕೊಂಡು ಬರಲಿಲ್ಲ?' ಮಾನಸಿಯೇ ಮಾತಿಗಿಳಿದಳು.

'ನಿನಗೆ ಹೃದಯವೇ ಇಲ್ಲ. ಸಾಕ್ಷಿ ಬರದೇ ಇವತ್ತಿಗೆ ಮೂರು ದಿನಗಳಾದವು. ಅದರ ಬಗ್ಗೆ ಸ್ವಲ್ಪವಾದ್ರೂ ಕಳಕಳಿ ಇದೆಯಾ?' ಹೇಳುತ್ತಿದ್ದಂತೆಯೇ ಅವಳ ಕಣ್ಣುಗಳಲ್ಲಿ ನೀರು ತುಂಬಿತು. ಮಾನಸಿ ಗಂಭೀರಳಾದಳು.

'ಮೀರಾ... ಈಗ ಏನು ಮಾಡ್ಬೇಕು ನೀನೇ ಹೇಳು. ಯಾರಿಗೂ ಹೇಳುವ ಹಾಗೂ ಇಲ್ಲ, ಕೇಳುವ ಹಾಗೂ ಇಲ್ಲಾಂತ ತಾನೆ ನಾವು ಅಂದುಕೊಂಡಿದ್ದು?'

'ಸಿಟಿಯಲ್ಲಿರೋ ಆ ಪೂರ್ಣಿಮಾ ಕೂಡಾ ಫೋನ್ ತೆಗೆದುಕೊಳ್ತಾಯಿಲ್ಲ. ಹಾಳಾದೋಳು. ಕಷ್ಟಕ್ಕಾಗೋಲ್ಲ ಏನೂ ಇಲ್ಲ. ಸ್ನೇಹಿತೆಯಂತೆ... ಸ್ನೇಹಿತೆ...' ಮೀರಾ ಸಿಡಿಗುಟ್ಟಿದಳು.

'ಅವಳಿಗೆ ನಮ್ಮ ಒತ್ತಡ ಹೇಗೆ ಗೊತ್ತಾಗುತ್ತೆ? ಮೊಬೈಲ್ ಫೋನ್‌ಗೆ ಏನಾಗಿದೆಯೋ ಏನೋ... ಒಂದ್ನಿಮಿಷ ತಾಳು. ಮತ್ತೆ ನಾನು ಫೋನ್ ಮಾಡ್ತೀನಿ...' ಎಂದು ಮಾನಸಿ, ಪೂರ್ಣಿಮಾಳಿಗೆ ಫೋನ್ ಮಾಡಿದಳು.

ಫೋನ್ ರಿಂಗಾಗುತ್ತಿತ್ತು. 'ಏನಾಯ್ತು?' ಮೀರಾ ಕಾತುರದಿಂದ ಕೇಳಿದಳು.

'ರಿಂಗಾಗ್ತಿದೆ... ಫೋನ್ ತಗೊಂಡಳು' ಎಂದ ಮಾನಸಿ, 'ಹಲೋ ಪೂರ್ಣಿಮಾ... ನಾನು ಮಾನಸಿ...' ಎಂದಳು.

'ಹಲೋ... ಏನು ವಿಷ್ಯ ಮಾನಸಿ... ನಂಗೆ ಫೋನ್ ಮಾಡಿದ್ದೀಯಾ?' ಅತ್ತ ಕಡೆಯಿಂದ ಪೂರ್ಣಿಮಾ ಕೇಳಿದಳು.

'ಶನಿವಾರದಿಂದಲೂ ನಿನ್ನ ಫೋನಿಗೆ ಪ್ರಯತ್ನ ಮಾಡ್ತಾನೆ ಇದ್ದೀವಿ. ಯಾಕೆ? ಫೋನ್ ಸರಿಯಾಗಿರಲಿಲ್ವಾ?'

'ಇಲ್ಲಾ ಮಾನಸಿ, ಶನಿವಾರ ಲೈಬ್ರರಿಗೆ ಹೋಗಿದ್ದಾಗ ಸೈಲೆಂಟ್ ಮಾಡ್ಕೊಂಡಿದ್ದೆ. ಅವಸರದಲ್ಲಿ ಬರುವಾಗ ಮರೆತು ಬಂದು ಬಿಟ್ಟಿದ್ದೆ. ಇವತ್ತು ಹೋಗಿ ತೆಗೆದುಕೊಂಡು ಬಂದೆ. ಲೈಬ್ರರಿಯನ್ ತೆಗೆದಿಟ್ಟಿದ್ದರು. ಸದ್ಯ ಸಿಕ್ಕಿತು...'

'ನಿನ್ನ ಮನೆಗೇನಾದರೂ ಸಾಕ್ಷಿ ಬಂದಿದ್ದಾಳಾ?' ಮಾನಸಿ ಕೇಳಿದಳು.

'ಸಾಕ್ಷೀನಾ? ನೋ ನೋ... ಈಗ ಪರೀಕ್ಷೆಗಾಗಿ ಓದೋದು ಬಿಟ್ಟು ಸಿಟಿಗೆಲ್ಲಿ ಬರ್ತಾಳೆ?' ಎಂದಳು ಪೂರ್ಣಿಮಾ.

'ಹೌದಾ? ನಿನ್ನ ಮನೆಗೆ ಬಂದಿದ್ದಾಳೇಂತಾ ಅಂದ್ಕೊಂಡಿದ್ದೆ. ಊರಿಗೇನಾದ್ರೂ ಹೋಗಿರ್ಬೇಕು ಬಿಡು.'

'ಇಲ್ಲಾ ಮಾನಸಿ... ಶನಿವಾರ ಸಾಯಂಕಾಲ ಐದು ಗಂಟೆಗೆ ಅನಾಟಮಿ ಬ್ಲಾಕ್‌ನತ್ತ ಹೋಗ್ತಾ ಇದ್ದಳು. ಅವಳೂ ಅವಸರದಲ್ಲಿದ್ದಳು. ನಾನೂ ಅವಸರದಲ್ಲಿದ್ದೆ. ಸಿಟಿ ಬಸ್ಸು ತಪ್ಪಿ ಹೋಗುತ್ತೇಂತಾ... ಯಾಕೆ? ಅವಳು ಹಾಸ್ಟೆಲಿಗೆ ಬಂದಿಲ್ವಾ?' ಪೂರ್ಣಿಮಾ ಆಶ್ಚರ್ಯದಿಂದ ಕೇಳಿದಳು.

'ಹಾಗೇನಿಲ್ಲ...' ಎಂದು ಹೇಳುತ್ತಿದ್ದ ಮಾನಸಿಯ ಮಾತನ್ನು ಅರ್ಧದಲ್ಲಿಯೇ ಕಡಿದ ಪೂರ್ಣಿಮಾ, 'ಎಲ್ಲಿ ಹೋಗ್ತಾಳೆ? ಅನಾಟಮಿ ಡಿಪಾರ್ಟ್‌ಮೆಂಟಿನಲ್ಲಿರೋ ಅವಳ ಊರಿನ ಅಸಿಸ್ಟೆಂಟ್ ಪ್ರೊಫೆಸರ್ ಶಿವಾನಂದನನ್ನು ಮಾತನಾಡಿಸಲು ಹೋಗಿರ್ತಾಳೆ. ಬರ್ತಾಳೆ ಬಿಡು...' ಹೇಳಿದಳು.

'ಸರಿ... ಸರಿ... ಥ್ಯಾಂಕ್ಸ್ ಪೂರ್ಣಿಮಾ...'

'ಇಟ್ಸ್ ಓ.ಕೆ...' ಎನ್ನುತ್ತಾ ಫೋನ್ ಕೆಳಗಿಟ್ಟಳು ಪೂರ್ಣಿಮಾ.

ಫೋನಿನಲ್ಲಿ ಮಾತಾನಾಡುತ್ತಿದ್ದ ಮಾನಸಿಯ ಮುಖಭಾವವನ್ನೇ ನೋಡುತ್ತಾ ಕುಳಿತಿದ್ದ ಮೀರಾ,